ಅನುಬಂಧ-III

ಕರ್ನಾಟಕ ವಿಧಾನ ಸಭೆ

ಹತ್ತನೇ ವಿಧಾನ ಸಭೆ
(ಆರನೇ ಅಧಿವೇಶನ)
(ಮುಂದುವರಿದ ಉಪವೇಶನಗಳು)

ಕರ್ನಾಟಕ ಧನ ವಿನಿಯೋಗ (ಸಂಖ್ಯೆ 5) ವಿಧೇಯಕ 1997

(1997ರ ವಿಧಾನಸಭಾ ವಿಧೇಯಕ ಸಂಖ್ಯೆ-33)

1988-89ನೇ ಹಣಕಾಸು ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಮಂಜೂರು ಮಾಡಿದ ಮೊಬಲಗಿಗೆ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಗೊಳಿಸಲು ಅಧಿಕಾರ ನೀಡಲು ಒಂದು ವಿಧೇಯಕ.

1988-89ನೇ ಹಣಕಾಸು ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಮಂಜೂರು ಮಾಡಿದ ಮೊಬಲಗಿಗೆ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಗೊಳಿಸುವುದಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ.

ಇದು ಭಾರತ ಗಣರಾಜ್ಯದ ನಲವತ್ತೆಂಟನೆಯ ವರ್ಷದಲ್ಲಿ ಕರ್ನಾಟಕ ರಾಜ್ಯದ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ:

1. ಸಂಕ್ಷಿಪ್ತ ಹೆಸರು: ಈ ಅಧಿನಿಯಮವನ್ನು ಕರ್ನಾಟಕ ಧನ ವಿನಿಯೋಗ (ನಂ.5) ಅಧಿನಿಯಮ 1997 ಎಂದು ಕರೆಯತಕ್ಕದ್ದು.

2. ಕರ್ನಾಟಕ ರಾಜ್ಯದ ಸಂಚಿತ ನಿಧಿಯೊಳಗಿಂದ 1988-89ನೇ ಹಣಕಾಸು ವರ್ಷದಲ್ಲಿ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ತುಂಬುವುದಕ್ಕಾಗಿ 36,85,89,485 ರೂಪಾಯಿಗಳ ನೀಡಿಕೆ: ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಂಧದಲ್ಲಿ 1988-89ನೇ ಹಣಕಾಸು ವರ್ಷದಲ್ಲಿ ಮಂಜೂರು ಮಾಡಿದ ಮೊಬಲಗಿಗೆ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಗೊಳಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ಮೂವತ್ತಾರು ಕೋಟಿ ಎಂಭತ್ತೈದು ಲಕ್ಷ ಎಂಭತ್ತೊಂಬತ್ತು ಸಾವಿರದ ನಾಲ್ಕನೂರ ಎಂಭತ್ತೈದು ರೂಪಾಯಿಗಳ ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ

ಸಂದಾಯವಾಗಿ ಉಪಯೋಗಿಸಲಾಗಿದೆ ಎಂದು ಭಾವಿಸತಕ್ಕುದು.

3. ಧನ ವಿನಿಯೋಗ: ಈ ಅಧಿನಿಯಮದ ಮೂಲಕ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು 1988-89ನೇ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸಿದೆ ಎಂದು ಭಾವಿಸತಕ್ಕುದು.

ಅನುಸೂಚಿ

(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

ಬೇಡಿಕೆ ಸಂಖ್ಯೆ	ಸೇವೆಗಳು ಮತ್ತು ಉದ್ದೇಶಗಳು		ಮೀರದ ಮೊಬಲಗು		ಒಟ್ಟು
			ವಿಧಾನ ಸಭೆಯಿಂದ ಪುರಸ್ಕೃತವಾದುದನ್ನು	ಸಂಚಿತ ನಿಧಿಯಿಂದ ಪ್ರಭೃತವಾದುದನ್ನು	
1	2		3	4	5
1	ಭೂಸಾರ ಮತ್ತು ಜಲ ಸಂರಕ್ಷಣೆ ಮತ್ತು ಕೃಷಿ (ತೋಟಗಾರಿಕೆ ಹೊರತುಪಡಿಸಿ)	-ರಾಜಸ್ವ	3,21,17,991	-	3,21,17,991
		- ಬಂಡವಾಳ	48,500	-	48,500
2	ಒಣ ಭೂ ಅಭಿವೃದ್ಧಿ	- ರಾಜಸ್ವ	13,69,819	-	13,69,819
7	ಗಣಿ ಮತ್ತು ಭೂಗರ್ಭ	- ರಾಜಸ್ವ	5,85,06,140	-	5,85,06,140
10	ರೇಷ್ಮೆ	- ಬಂಡವಾಳ	1,44,452	-	1,44,452
16	ಪ್ರೌಢ ಶಿಕ್ಷಣ	- ರಾಜಸ್ವ	2,04,62,450	-	2,04,62,450
...	ಬಡ್ಡಿ ಸಂದಾಯ	- ರಾಜಸ್ವ	-	1915,615	19,15,615

1	2		3	4	5
19	ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು	-ರಾಜಸ್ವ	6,58,18,585	-	6,58,18,585
23	ಆಹಾರ ಮತ್ತು ನಾಗರೀಕ ಸರಬರಾಜು	- ಬಂಡವಾಳ	1,80,661	-	1,80,661
35	ಸಣ್ಣ ನೀರಾವರಿ	- ಬಂಡವಾಳ	3,35,61,431	-	3,35,61,431
37	ರಾಜ್ಯದ ವಿಧಾನ ಮಂಡಲ	- ರಾಜಸ್ವ	-	62,153	62,153
45	ಲೋಕೋಪಯೋಗಿ ಕಾಮಗಾರಿಗಳು (ನಿರ್ಮಾಣ ಹೊರತುಪಡಿಸಿ)	- ರಾಜಸ್ವ	-	2,99,766	2,99,766
46	ಕಟ್ಟಡಗಳು	- ರಾಜಸ್ವ	18,67,911	-	18,67,911
47	ರಸ್ತೆಗಳು ಮತ್ತು ಸೇತುವೆಗಳು	- ರಾಜಸ್ವ	3,33,40,607	-	3,33,40,607
52	ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ	- ರಾಜಸ್ವ	-	92,55,630	92,55,630
53	ಪುನರುಜ್ಜೀವನ ಕಾರ್ಯಗಳು	- ರಾಜಸ್ವ	60,597	-	60,597
61	ಗ್ರಾಮೀಣ ಉದ್ಯೋಗ ಕಾರ್ಯಕ್ರಮಗಳು	- ರಾಜಸ್ವ	10,95,77,177	-	10,95,77,177
		ಒಟ್ಟು ಜುಮ್ಲಾ	36,63,11,951	22,77,534	36,85,89,485

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

1988-89ನೇ ಹಣಕಾಸು ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಮಂಜೂರು ಮಾಡಲಾದ ಮೊಬಲಗಿಗಿಂತ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಗೊಳಿಸಲು ಭಾರತ ಸಂವಿಧಾನದ 205 (1) (ಬಿ) ನೇ ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಸಿದ್ದರಾಮಯ್ಯ
ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು,
ಯೋಜನೆ ಮತ್ತು ಕಾರ್ಮಿಕ ಸಚಿವರು,

ಯಾಕೂಬ್ ಪರೀಫ್
ಕಾರ್ಯದರ್ಶಿ